**ಪಿ.ಡಬ್ಲ್ಯೂ-1**

**ದಿಃ 20.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿಗಳ ಪರ ಮಾನ್ಯ ಡಿಜಿಪಿ ರವರಿಂದಃ**

ನಾನು ಪದವಿದರ. ಕೇಸು ಹಾಕಲು ಮಾಹಿತಿ ನಾನೇ ನೀಡಿದ್ದೇನೆ. ವಾದ ಪತ್ರದಲ್ಲಿ ಬರೆದ ಸಂಗತಿ ಸತ್ಯವಿದೆ. ನನಗೆ ದಾಖಲೆಗಳ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ಸರ್ವೆ ನಂಬರ 350 ರಲ್ಲಿರುವ ಜಮೀನು ಸರ್ಕಾರಿ ಜಮೀನು ಎಂದರೆ ಸರಿ. ಸರ್ವೆ ನಂಬರ 350 ರ ಪೂರ್ವಕ್ಕೆ ನಮ್ಮ ಜಮೀನು ಇದೆ ಎಂದರೆ ಸರಿ. ಸರ್ವೆ ನಂಬರ 350 ರ ದಕ್ಷಿಣಕ್ಕೆ ನನ್ನ ಸರ್ವೆ ನಂಬರ 366 ಮತ್ತು 367 ರ ಜಮೀನು ಇದೆ ಎಂದರೆ ಸರಿ. ಸರ್ವೆ ನಂಬರ 350ರ ಹಳೆಯ ಸರ್ವೆ ನಂಬರ 5/1 ಎಂದರೆ ಸರಿ. ಸರ್ವೆ ನಂಬರ 5/1ರ ಜಮೀನನ್ನು ಕಾರ್ಮಿಕ ಇಲಾಖೆಗೆ ಕೊಡುವ ಪೂರ್ವದಲ್ಲಿ ಐಟಿಐ ಕಾಲೇಜಿಗೆ ಕೊಡಲಾಗಿತ್ತು ಎಂದರೆ ಸರಿ.

ಸರ್ವೆ ನಂಬರ 5/1 ರ ಒಟ್ಟು ಜಮೀನಿನ ಪೈಕಿ ದಿನಾಂಕ 12.02.2009 ರಂದು 2 ಎಕರೆ ಜಮೀನನ್ನು ಕಾರ್ಮಿಕ ಇಲಾಖೆಗೆ ಕೊಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ 2 ಎಕರೆಯಲ್ಲಿ ಕಾರ್ಮಿಕ ಇಲಾಖೆಯ ಕಟ್ಟಡ ಇದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಸದರಿ ಜಮೀನು 2 ಎಕರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ 2 ಎಕರೆ ಜಮೀನನ್ನು ನಾನು ಅಳತೆ ಮಾಡಿಸಿಲ್ಲ.

ನಾನು 2012 ರಲ್ಲಿ ಐಟಿಐ ಮತ್ತು ಸರ್ಕಾರದ ಮೇಲೆ OS No.2094/2012 ದಾಖಲು ಮಾಡಿದ್ದೆ ಎಂದರೆ ಸರಿ. ಸದರಿ ದಾವೆಯಲ್ಲಿ ತೋರಿಸಲಾದ ಆಸ್ತಿಯನ್ನೆ ಈ ಪ್ರಕರಣದಲ್ಲಿ ದಾವಾ ಆಸ್ತಿಯನ್ನಾಗಿ ತೋರಿಸಲಾಗಿದೆ ಎಂದರೆ ಸರಿ. ಸದರಿ ಪ್ರಕರಣ ದಿನಾಂಕ 03.04.2017

This is a True Copy of the Court Records Online. Authenticated @ districts.ecourtsindia.com/cnr/KABG040018692020/truecopy/order-7.pdf

www.ecourtsindia.com



ರಂದು ವಜಾ ಆಗಿದೆ ಎಂದರೆ ಸರಿ. ಸದರಿ ತೀರ್ಪನ್ನು ನಾನು ಪ್ರಶ್ನೆ ಮಾಡಿಲ್ಲ. 2012 ರ ಕಾಲಕ್ಕೆ ದಾವಾ ಆಸ್ತಿ ಕಾರ್ಮಿಕ ಇಲಾಖೆಯ ಮಾಲೀಕತ್ವದಲ್ಲಿ ಇತ್ತು ಎಂದರೆ ಸರಿ. 2012 ರಲ್ಲಿ ಕೇಸು ಹಾಕುವ ಸಮಯದಲ್ಲಿ ದಾವಾ ಆಸ್ತಿ ಕಾರ್ಮಿಕ ಇಲಾಖೆಗೆ ಸಂಬಂಧಿಸಿದ ವಿಚಾರ ಗೊತ್ತಿತ್ತು ಎಂದರೆ ಸರಿ. ಆ ರೀತಿ ಮಾಹಿತಿ ಇದ್ದರೂ ಸಹ ಕಾರ್ಮಿಕ ಇಲಾಖೆಯನ್ನು ಪಕ್ಷಗಾರನ್ನಾಗಿ ಮಾಡದೇ ನ್ಯಾಯಾಲಯಕ್ಕೆ ಮೋಸ ಮಾಡಿ ಡಿಕ್ರಿ ಪಡೆಯಬೇಕು ಎಂಬ ಉದ್ದೇಶದಿಂದ ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ ಸಾಕ್ಷಿ ಕಾರ್ಮಿಕ ಇಲಾಖೆ ಜಮೀನು ಕೊಟ್ಟಿರುವುದು ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ನನಗೆ 2012 ರಲ್ಲಿ ಕಾರ್ಮಿಕ ಇಲಾಖೆಗೆ ಆಸ್ತಿ ಕೊಟ್ಟಿರುವ ವಿಚಾರ ಗೊತ್ತಿತ್ತು.

ಕಾರ್ಮಿಕ ಇಲಾಖೆಯವರು 2020 ರಲ್ಲಿ ಕಟ್ಟಡ ಕಟ್ಟಿದ್ದಾರೆ ಎಂದರೆ ಸಾಕ್ಷಿ ಅದಕ್ಕೂ ಪೂರ್ವದಲ್ಲಿ ಅಂದರೆ 2012 ರಲ್ಲೆ ಕಟ್ಟಿದ್ದಾರೆ ಎಂದು ನುಡಿಯುತ್ತಾರೆ. ಕಟ್ಟಡ ಕಟ್ಟುವಾಗ ನಾನು ಯಾವುದೇ ತಕರಾರು ಮಾಡಿಲ್ಲ. 2020 ರಲ್ಲಿ ಸದರಿ ಇಲಾಖೆಯವರು ತಮ್ಮ ಆಸ್ತಿ ಸುತ್ತ ಕಂಪೌಂಡ ಕಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನಮ್ಮ ಆಸ್ತಿಯಲ್ಲಿ ದಾರಿ ಬಿಟ್ಟಿದ್ದೆ ಸದರಿ ಆಸ್ತಿಯಲ್ಲಿಯೂ ಸಹ ಕಂಪೌಂಡ ಕಟ್ಟಿದ್ದಾರೆ ಎಂದು ನುಡಿಯುತ್ತಾರೆ.

ಮಜಗಾಂವ ಗ್ರಾಮ ನಕಾಶೆಯಲ್ಲಿ ರಸ್ತೆ ಮತ್ತು ಹಳ್ಳ ಮತ್ತು ಇತರೆ ಸಂಗತಿಗಳನ್ನು ತೋರಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಸದರಿ ಗ್ರಾಮ ನಗರಕ್ಕೆ ಸೇರಿಕೊಂಡ ನಂತರ ನಕಾಶೆ ಬದಲಾಗಿದೆ ಎಂದು ನುಡಿಯುತ್ತಾರೆ. ನಾನು ಬದಲಾದ ನಕಾಶೆಯನ್ನು ಹಾಜರು ಮಾಡಿರುತ್ತೇನೆ. ನಿಪಿ 5 ಸದರಿ ನಕಾಶೆ ಆಗಿರುತ್ತದೆ. ನಿಪಿ 5 ರಲ್ಲಿ ಸರ್ವೆ ನಂಬರ 366 ಮತ್ತು 367 ರ ಉತ್ತರಕ್ಕೆ ರಸ್ತೆ ಇದೆ ಎಂದರೆ ಸರಿ. ರಸ್ತೆಯ ಉತ್ತರಕ್ಕೆ ಸರ್ವೆ ನಂಬರ 350(5/1) ರ ಜಮೀನು ಇದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ವಾಹನಗಳು ಸಂಚರಿಸುತ್ತವೆ ಎಂದರೆ ಸರಿ. ದಿನಾಂಕ

This is a True Copy of the Court Records Online. Authenticated @ districts.ecourtsindia.com/cnr/KABG040018692020/truecopy/order-7.pdf

www.ecourtsindia.com



07.10.2020 ರಂದು ಅಂದರೆ ಕಂಪೌಂಡ ಹಾಕುವ ಪೂರ್ವದಲ್ಲಿ ಕಾರ್ಮಿಕ ಇಲಾಖೆಯವರು ಒಂದು ನಡಾವಳಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ನಡಾವಳಿಯ ಪೂರ್ವದಲ್ಲಿ ನನಗೆ ಒಂದು ನೋಟಿಸ್ ಕೊಟ್ಟಿದ್ದರು ಎಂದರೆ ಸರಿಯಲ್ಲ. ನಗರ ಭೂ ಮಾಪನ ಇಲಾಖೆಯವರು ಕಾರ್ಮಿಕ ಇಲಾಖೆಯ ಜಮೀನನ್ನು ಹದ್ದುಬಸ್ತು ಮಾಡುವ ಉದ್ದೇಶದಿಂದ ನೋಟಿಸ್ ಕೊಟ್ಟಿದ್ದರು ಎಂದರೆ ಸರಿಯಲ್ಲ. ದಿನಾಂಕ 15.06.2020 ರಂದು ನಗರ ಭೂ ಮಾಪನ ಇಲಾಖೆಯವರು ನನ್ನ ಮತ್ತು ಇತರೆಯವರ ಸಮಕ್ಷಮ ಹದ್ದುಬಸ್ತು ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಮತ್ತು ಇತರ ರೈತರು ಸದರಿ ಹದ್ದುಬಸ್ತಿಗೆ ತಕರಾರು ಇಲ್ಲ ಎಂದು ತಿಳಿಸಿರುತ್ತೇವೆ ಎಂದರೆ ಸರಿಯಲ್ಲ. ಕಾಂಪೌಂಡ್ ಕಟ್ಟುವ ಉದ್ದೇಶದಿಂದ ಹದ್ದುಬಸ್ತು ಮಾಡಿರುತ್ತಾರೆ ಎಂದರೆ ಇರಬಹುದು, ಸಾಕ್ಷಿ ಮುಂದುವರಿದು ತಮಗೆ ಬೇಕಾದಂತೆ ಹದ್ದುಬಸ್ತು ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಾನು ಸದರಿ ನಡಾವಳಿಗೆ ಸಹಿ ಮಾಡಿಲ್ಲ. ನಾನು ಮತ್ತು ಇತರ ರೈತರು ಒಪ್ಪಿಗೆ ಕೊಟ್ಟ ಕಾರಣ ಸದರಿ ಇಲಾಖೆಯವರು ಕಾಂಪೌಂಡ್ ಕಟ್ಟಿದ್ದಾರೆ ಎಂದರೆ ಸರಿಯಲ್ಲ.

ಕಾರ್ಮಿಕ ಇಲಾಖೆಯ ಆಸ್ತಿಯ ಪಶ್ಚಿಮಕ್ಕೆ ಅಂದರೆ ಕಾಂಪೌಂಡ್ ಗೆ ಹೊಂದಕೊಂಡಂತೆ 12 ಅಡಿ ಅಗಲದ ಪಲ್ಲಕ್ಕಿ ರಸ್ತೆ ಇದೆ ಎಂದರೆ ಸರಿ. ಕಾರ್ಮಿಕ ಇಲಾಖೆಯ ಆಸ್ತಿಯಲ್ಲಿ 12 ಅಡಿ ಅಗಲದ ಪಲ್ಲಕ್ಕಿ ರಸ್ತೆ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಮೂಲ ಪಲ್ಲಕ್ಕಿ ರಸ್ತೆಯನ್ನು ಕಾಂಪೌಂಡ್ ಹಾಕಿ ಬ್ಲಾಕ್ ಮಾಡಿ ಹೊಸದಾಗಿ ಕಾರ್ಮಿಕ ಇಲಾಖೆಯವರು 12 ಅಡಿ ಅಗಲದ ಪಲ್ಲಕ್ಕಿ ರಸ್ತೆ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸರ್ವೆ ನಂಬರ 366 ಮತ್ತು 367 ರ ಜಮೀನನ್ನು ಹೊಂದಿಕೊಂಡಂತೆ ಸದರಿ ಪಲ್ಲಕ್ಕಿ ರಸ್ತೆ ಸಾಗಿರುತ್ತದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ವಾಹನಗಳು ಸಂಚರಿಸುತ್ತವೆ ಎಂದರೆ ಸರಿ. ನಾನು ಕೂಡ ಸದರಿ ರಸ್ತೆ ಬಳಸುತ್ತೇನೆ ಎಂದರೆ

This is a True Copy of the Court Records Online. Authenticated @ districts.ecourtsindia.com/cnr/KABG040018692020/truecopy/order-7.pdf

ಸರಿಯಲ್ಲ. ನಾನು ಸರ್ವೆ ನಂಬರ 366 ಮತ್ತು 367 ರ ಜಮೀನಿಗೆ ಈಗ ಹೋಗುವುದಿಲ್ಲ. ಸಾಕ್ಷಿ ಮುಂದುವರಿದು ರಸ್ತೆ ಇಲ್ಲದ ಕಾರಣ ಹೋಗುತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಕಳೆದ 5 ವರ್ಷದಿಂದ ಸದರಿ ಜಮೀನಿಗೆ ಹೋಗಿಲ್ಲ.

**ಮುಂದುವರೆದ ಪಾಟೀ ಸವಾಲು:** ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

Sd/-

1ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಬೆಳಗಾವಿ.

This is a True Copy of the Court Records Online. Authenticated @ districts.ecourtsindia.com/cnr/KABG040018692020/truecopy/order-7.pdf